## <u>ಕರ್ನಾಟಕ ವಿಧಾನ ಪರಿಷತ್</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1032 (1134)

ಸದಸ್ಯರ ಹೆಸರು : ಶ್ರೀ. ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 16.12.2025

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2023 ನೇ ಸಾಲಿನಿಂದ 2025ನೇ ಸಾಲಿನವರೆಗೆ ಮೈಸೂರು, ಮಂಡ್ಯ, ಹಾಸನ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ಅಭಿವೃದ್ಧಿಗೆ ಯಾವ ಯಾವ ಕೆಲಸ ಕಾರ್ಯಗಳಿಗೆ ತೋಟಗಾರಿಕೆ ಇಲಾಖೆಯಿಂದ ಅನುದಾನವನ್ನು ನೀಡಲಾಗಿದೆ: (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು). | **2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಮೈಸೂರು, ಮಂಡ್ಯ, ಹಾಸನ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯ ಉದ್ಯಾನವನಗಳ ಅಭಿವೃದ್ಧಿಗೆ ಕೈಗೊಳ್ಳಲಾಗಿರುವ ಕೆಲಸ ಕಾರ್ಯಗಳಿಗೆ ಅನುದಾನವನ್ನು ನೀಡಲಾಗಿದೆ.**<br><br>1. **<u>ಮೈಸೂರು ಜಿಲ್ಲೆ (ಮೈಸೂರು ತಾಲ್ಲೂಕು):</u>**<br><br>I. **ಕುಪ್ಪಣ್ಣ ಪಾರ್ಕ್:**<br>• ಉದ್ಯಾನವನ ನಿರ್ವಹಣೆ, ಯಂತ್ರೋಪಕರಣಗಳ ಖರೀದಿ ಹಾಗೂ ದುರಸ್ಥಿ, ಇಂಧನ, ವಿದ್ಯುತ್ ಬಾಬ್ತು/ಸಲಕರಣೆಗಳ ಖರೀದಿ, ನೀರಾವರಿ ಸೌಕರ್ಯಗಳಿಗೆ ಉಪಕರಣಗಳನ್ನು ಖರೀದಿಸುವುದು, ಸಾವಯವ ಗೊಬ್ಬರ, ಬೇವಿನ ಹಿಂಡಿ ಖರೀದಿ, ವಿದ್ಯುತ್ ದೀಪಗಳ ದುರಸ್ಥಿ ಮತ್ತು ನಿರ್ವಹಣೆ, ಹಾಲಿ ಇರುವ ಮಹಾರಾಜರ ಆಳ್ವಿಕೆ ಕಾಲದಲ್ಲಿ ನಿರ್ಮಿಸಿರುವ ಗಾಜಿನ ಮೊಗಸಾಲೆಯ ನವೀಕರಣ, ನೃತ್ಯ ಕಾರಂಜಿಯ ಎಡ ಭಾಗದಲ್ಲಿ Cobble Stone ಅಳವಡಿಸುವ ಕಾಮಗಾರಿ., ಕುಪ್ಪಣ್ಣ ಪಾರ್ಕ್ ಉದ್ಯಾನವನದ ಗ್ಲಾಸ್ ಹೌಸ್ ಸುತ್ತ ಭೂದೃಶ್ಯ ಕಾಮಗಾರಿ ಇತ್ಯಾದಿಗಳನ್ನು ಕೈಗೊಳ್ಳಲಾಗಿರುತ್ತದೆ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 79.40 ಲಕ್ಷಗಳನ್ನು ನೀಡಲಾಗಿದೆ.<br><br>II. **ಸರ್ಕಾರಿ ಭವನ:**<br>• ಉದ್ಯಾನವನ ನಿರ್ವಹಣೆ, ಯಂತ್ರೋಪಕರಣಗಳ ಖರೀದಿ ಹಾಗೂ ದುರಸ್ಥಿ, ಇಂಧನ, ವಿದ್ಯುತ್ ಬಾಬ್ತು, ವಿದ್ಯುತ್ ದೀಪಗಳ ದುರಸ್ಥಿ ಮತ್ತು ನಿರ್ವಹಣೆ , ಬೇವಿನ ಹಿಂಡಿ ಖರೀದಿ, ರಾಸಾಯನಿಕ ಗೊಬ್ಬರ ಹಾಗೂ ಸಸ್ಯ ಸಂರಕ್ಷಣಾ ಔಷದಿ, ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ ಹಾಗೂ ಕುದುರೆ ಗೊಬ್ಬರ ಖರೀದಿ ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 47.00 ಲಕ್ಷಗಳನ್ನು ನೀಡಲಾಗಿದೆ.<br>III. **<u>ಲಿಂಗಾಂಬುಧಿ ಸಸ್ಯ ಶಾಸ್ತ್ರೀಯ ತೋಟ :</u>**<br>• ಲಿಂಗಾಂಬುಧಿ ಸಸ್ಯ ತೋಟದ ನಿರ್ವಹಣೆ, ನೂತನ ಯಂತ್ರೋಪಕರಣಗಳನ್ನು ಖರೀದಿಸುವುದು ಹಾಗೂ ರಿಪೇರಿ, ಗಿಡ ಮರಗಳಿಗೆ, ಅಲಂಕಾರಿಕ ಗಿಡಗಳಿಗೆ ಮತ್ತು ಗುಲಾಬಿ ತಾಕಿನ ನಿರ್ವಹಣೆಗಾಗಿ ಬೇವಿನ ಹಿಂಡಿ ಖರೀದಿಸುವುದು, ಸಸ್ಯ ಸಂರಕ್ಷಣೆ ಔಷಧಿ, ಜೈವಿಕ ಕೀಟ ಮತ್ತು ಪೀಡೆನಾಶಕ |

| | | |
|---|---|---|
| | | ಪರಿಕರಗಳನ್ನು ಖರೀದಿಸುವುದು, ಕೊಳವೆ ಬಾವಿ ನೂತನ ಮೋಟಾರು ಯಂತ್ರ ಹಾಗೂ ಬಿಡಿಭಾಗಗಳನ್ನು ಖರೀದಿಸುವುದು ಮತ್ತು ದುರಸ್ಥಿ, ಶಾಶ್ವತ ವಿದ್ಯುತ್ ಬಿಲ್ ಬಾಬ್ತು, ಸ್ಲೋಪ್ ಗಾರ್ಡನ್ ನ ಹೊಸ ಪಾತ್ ವೇ ಎರಡು ಬದಿಗೆ ಶಾಶ್ವತ ಪ್ಲಾಟಂರ್ ಬಾಕ್ಸ್ ನಿರ್ಮಿಸುವುದು, ಮುಖ್ಯ ರಸ್ತೆಗೆ ಒಂದು ಬದಿಯಲ್ಲಿ ಶಾಶ್ವತ ಪ್ಲಾಟಂರ್ ಬಾಕ್ಸ್ ನಿರ್ಮಿಸುವುದು, ಎರಡು ಕೊಳಗಳ ಮದ್ಯದಲ್ಲಿ ಕುಳಿತುಕೊಳ್ಳುವುದಕ್ಕೆ ನೈಸರ್ಗಿಕ ಕಲ್ಲುಗಳಿಂದ 2 ಅಡಿ ಎತ್ತರದಲ್ಲಿ 30 ಅಡಿ ಉದ್ದಕ್ಕೆ ಗೋಡೆ ನಿರ್ಮಾಣ, Slope Gardenನಲ್ಲಿ ಹೊಸ ಪಾತ್ ವೇಗೆ Pergola ನಿರ್ಮಿಸುವುದು ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 168.85 ಲಕ್ಷಗಳನ್ನು ನೀಡಲಾಗಿದೆ.<br><br>**IV. <u>ಕರ್ಜನ್ ಪಾರ್ಕ್ :</u>**<br>• ಉದ್ಯಾನವನ ನಿರ್ವಹಣೆ, ಯಂತ್ರೋಪಕರಣಗಳ ಖರೀದಿ ಹಾಗೂ ದುರಸ್ಥಿ, ಇಂಧನ, ವಿದ್ಯುತ್ ಬಾಬ್ತು/ ಸಲಕರಣೆಗಳ ಖರೀದಿ, ಸಾವಯವ ಗೊಬ್ಬರ, ಬೇವಿನ ಹಿಂಡಿ ಖರೀದಿ, ರಾಸಾಯನಿಕ ಗೊಬ್ಬರ ಹಾಗೂ ಸಸ್ಯ ಸಂರಕ್ಷಣಾ ಔಷದಿ ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 46.75 ಲಕ್ಷಗಳನ್ನು ನೀಡಲಾಗಿದೆ.<br><br>**2. <u>ಮಂಡ್ಯ ಜಿಲ್ಲೆ:</u>**<br><br>**I. ಕಾವೇರಿ ವನ, ಭವ್ಯ ವನ (ಮಂಡ್ಯ ತಾಲ್ಲೂಕು)**<br>• ಕಾವೇರಿ ವನ, ಭವ್ಯ ವನ ಉದ್ಯಾನವನದಲ್ಲಿ ಉದ್ಯಾನವನ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ ಭದ್ರತಾ ಮತ್ತು ಹುಲ್ಲುಹಾಸು ನಿರ್ವಹಣೆ, ಸಾಮಾನ್ಯ ಸ್ವಚ್ಛತೆ, ಪಾತಿ ಮಾಡುವುದು, ನೃತ್ಯ ಕಾರಂಜಿ ನಿರ್ವಹಣೆ, ಔಷಧಿ ಸಿಂಪಡಣೆ ಹಾಗೂ ಇತ್ಯಾದಿ ಕೆಲಸಗಳನ್ನು ಕೈಗೊಳ್ಳಲಾಗಿರುತ್ತದೆ.<br>• ಉದ್ಯಾನವನಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಿದ್ಯುತ್ ಬಿಲ್ ಪಾವತಿ, ವಿದ್ಯುತ್ ಉಪಕರಣ, ಯಂತ್ರೋಪಕರಣಗಳ ಖರೀದಿ/ದುರಸ್ಥಿ, ಇಂಧನ,ವಾಟರ್ ಫಾಲ್ಸ್, ಕ್ಯಾಶ್ ಕೇಡ್, ಕಳೆ ಕೊಚ್ಚುವ ಯಂತ್ರ ಹಾಗೂ ಇನ್ನಿತರೆ ಸಲಕರಣೆಗಳ ಖರೀದಿ/ರಿಪೇರಿ, ಗಿಡಗಳ ಖರೀದಿ, ಸಾವಯವಗೊಬ್ಬರ ಖರೀದಿ, ಬೇವಿನಹಿಂಡಿ, ಕೆಂಪುಮಣ್ಣು, ಸಸ್ಯಸಂರಕ್ಷಣ ಔಷಧಿ ಖರೀದಿ, ರಸಾಯನಿಕಗೊಬ್ಬರಗಳ ಖರೀದಿ, ಕೀಟನಾಶಕ ಮತ್ತು ರೋಗನಾಶಕಗಳ ಖರೀದಿ ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 88.99 ಲಕ್ಷಗಳನ್ನು ನೀಡಲಾಗಿದೆ.<br><br>**II. ಶಿವಪುರ ಸತ್ಯಾಗ್ರಹ ಸೌಧದ ಉದ್ಯಾನವನ (ಮದ್ದೂರು ತಾಲ್ಲೂಕು)**<br>• ಉದ್ಯಾನವನ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ ಭದ್ರತಾ ಮತ್ತು ಹುಲ್ಲುಹಾಸು ನಿರ್ವಹಣೆ, ಸಾಮಾನ್ಯ ಸ್ವಚ್ಛತೆ, ಪಾತಿ ಮಾಡುವುದು, ಔಷಧಿ ಸಿಂಪಡಣೆ ಹಾಗೂ ಇತ್ಯಾದಿ ಕೆಲಸಗಳನ್ನು ಕೈಗೊಳ್ಳಲಾಗಿರುತ್ತದೆ.<br>• ಉದ್ಯಾನವನಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಿದ್ಯುತ್ |

| | | |
|---|---|---|
| | | ಬಿಲ್ ಪಾವತಿ, ವಿದ್ಯುತ್ ಉಪಕರಣ, ಕಳೆ ಕೊಚ್ಚುವ ಯಂತ್ರ ಹಾಗೂ ಇನ್ನಿತರೆ ಸಲಕರಣೆಗಳ ಖರೀದಿ/ರಿಪೇರಿ, ಗಿಡಗಳ ಖರೀದಿ, ಸಾವಯವ ಗೊಬ್ಬರ ಖರೀದಿ, ಬೇವಿನ ಹಿಂಡಿ, ಕೆಂಪು ಮಣ್ಣು, ಸಸ್ಯಸಂರಕ್ಷಣಾ ಔಷಧಿ ಖರೀದಿ, ರಸಾಯನಿಕ ಗೊಬ್ಬರಗಳ ಖರೀದಿ, ಕೀಟನಾಶಕ ಮತ್ತು ರೋಗನಾಶಕಗಳ ಖರೀದಿ ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 5.78 ಲಕ್ಷಗಳನ್ನು ನೀಡಲಾಗಿದೆ.<br><br>**III. ಕೃಷ್ಣರಾಜಸಾಗರ (ಶ್ರೀ ರಂಗಪಟ್ಟಣ ತಾಲ್ಲೂಕು)**<br>• ಉದ್ಯಾನವನ ನಿರ್ವಹಣೆ (ಸಾಮಾನ್ಯ, ಸ್ವಚ್ಛತೆ, ಉಳುಮೆ, ಔಷಧಿ ಸಿಂಪಡಣೆ ಇತ್ಯಾದಿ.), ಇತರೆ ಗುತ್ತಿಗೆ ಆಧಾರದಲ್ಲಿ ಬೃಂದಾವನ ನಿರ್ವಹಣೆ, ಸಾವಯವ ಗೊಬ್ಬರ ಖರೀದಿ, ಯಂತ್ರೋಪಕರಣ ಮತ್ತು ಬಿಡಿಭಾಗಗಗಳ ಖರೀದಿ, ಮಣ್ಣಿನ ಕುಂಡಗಳ ಖರೀದಿ, ದಕ್ಷಿಣ ಬೃಂದಾವನದ ಮೊದಲನೇ ಇಳಿಜಾರಿನ ನವೀಕರಣ, ಬೃಂದಾವನ ನಿರ್ವಹಣೆಗೆ ಕೀಟನಾಶಕ ಹಾಗೂ ರೋಗನಾಶಕಗಳ ಖರೀದಿ ಇತ್ಯಾದಿ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 193.00 ಲಕ್ಷಗಳನ್ನು ನೀಡಲಾಗಿದೆ.<br><br>**3. <u>ಹಾಸನ ಜಿಲ್ಲೆ (ಹಾಸನ ತಾಲ್ಲೂಕು)</u>**<br><br>**I. ಎಸ್.ಜೆ.ಓ ಪಾರ್ಕ್**<br>ಉದ್ಯಾನವನದ ಭದ್ರತಾ ಸಿಬ್ಬಂದಿ/ತೋಟಗಾರರ ನೇಮಕ, ಉದ್ಯಾನವನದ ಸ್ವಚ್ಛತಾ ಕಾರ್ಯ, ಸಸ್ಯ ಸಂರಕ್ಷಣೆ ಔಷಧಿ/ಸಸ್ಯ ಪೋಷಕಾಂಶಗಳ ಖರೀದಿ ಹಾಗೂ ಹೊಸ ಅಲಂಕಾರಿಕ ಗಿಡಗಳನ್ನು ಉದ್ಯಾನವನದಲ್ಲಿ ನೆಡಲು ಬಳಸಿಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ 2023 ನೇ ಸಾಲಿನಿಂದ 2025 ನೇ ಸಾಲಿನವರೆಗೆ ಒಟ್ಟು ರೂ. 12.00 ಲಕ್ಷಗಳನ್ನು ನೀಡಲಾಗಿದೆ.<br><br>**4. <u>ಚಾಮರಾಜನಗರ</u>**: ತೋಟಗಾರಿಕೆ ಇಲಾಖೆ ವ್ಯಾಪ್ತಿಯ ಯಾವುದೇ ಉದ್ಯಾನವನವು ಚಾಮರಾಜನಗರದಲ್ಲಿ ಇರುವುದಿಲ್ಲ. |
| **(ಆ)** | **ಈ ನಾಲ್ಕು ಜಿಲ್ಲೆಗಳ ಉದ್ಯಾನವನಗಳ ಅಭಿವೃದ್ಧಿ ಕೆಲಸಗಳು ಹೆಚ್ಚಾಗಿ ಮಾಡಬೇಕಾಗಿರುವುದರಿಂದ ಸರ್ಕಾರದಿಂದ ಜಿಲ್ಲೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?** | ಅನುದಾನ ಲಭ್ಯತೆಗೆ ಅನುಗುಣವಾಗಿ ಹೆಚ್ಚಿನ ಅನುದಾನವನ್ನು ನೀಡಲಾಗುತ್ತಿದೆ. |

**ಸಂಖ್ಯೆ: HORTI 559 HGM 2025**

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು